ಕರ್ನಾಟಕ ರಾಜ್ಯ ಹಣಕಾಸು ನಿಗಮದ ಬಂಡವಾಳ ಹೂಡಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 917(1355)

ಸದಸ್ಯರ ಹೆಸರು: ಶ್ರೀ ಬಚ್ಚೇಗೌಡ ಬಿ.ಎನ್.(ಹೊಸಕೋಟೆ)

ಪ್ರಶ್ನೆ

ಅ) ಕರ್ನಾಟಕ ರಾಜ್ಯ ಹಣಕಾಸು ನಿಗಮದ ಒಟ್ಟು ಬಂಡವಾಳ ಹೂಡಿಕೆ ಎಷ್ಟು?

ಆ) ಈ ನಿಗಮವು ಆರ್ಥಿಕ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನಿಗಮ ಕಳೆದ 3 ವರ್ಷಗಳಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಂಜೂರು ಮಾಡಿದ ಸಾಲದ ಮೊತ್ತವೆಷ್ಟು? ಇಲ್ಲಿಯವರೆಗೆ ವಸೂಲಾದ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಈ) ಮರುಪಾವತಿ ಮಾಡದೇ ಇರುವವರ ಮೇಲೆ ಇಲ್ಲಿಯವರೆಗೆ ನಿಗಮ ತೆಗೆದುಕೊಂಡ ಕ್ರಮವೇನು ವಿವರ ನೀಡುವುದು?

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು)

ಉತ್ತರ

ಅ) 5165.54 ಕೋಟಿ ರೂ.ಗಳು

ಆ) ಹೌದು.

ಇ) ಕಳೆದ 3 ವರ್ಷಗಳಿಂದ ಕರ್ನಾಟಕ ರಾಜ್ಯ ಹಣಕಾಸು ನಿಗಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಘಟಕಗಳಿಗೆ ಒಟ್ಟಾರೆ 44.72 ಕೋಟಿ ರೂ.ಗಳ ನೆರವು ನೀಡಿದ ಹಾಗೂ 81.78 ಕೋಟಿ ರೂ.ಗಳ ವಸೂಲಾತಿಯನ್ನು ಮಾಡಿರುತ್ತದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿರುತ್ತದೆ.

(ಮೊತ್ತ ಕೋಟಿ ರೂ.ಗಳಲ್ಲಿ)

ತಾಲ್ಲೂಕಿನ ಹೆಸರು	ಮಂಜೂರಾತಿ	ವಸೂಲಾತಿ
ಚನ್ನಪಟ್ಟಣ	2.48	5.61

ದೇವನಹಳ್ಳಿ	6.63	2.97
ದೊಡ್ಡಬಳ್ಳಾಪುರ	5.09	19.01
ಹೊಸಕೋಟೆ	12.72	26.85
ಕನಕಪುರ	0.82	3.65
ಮಾಗಡಿ	1.98	4.47
ನೆಲಮಂಗಲ	10.82	11.32
ರಾಮನಗರ	4.18	7.90
ಒಟ್ಟು	44.72	81.78

ಈ) ಸಂಸ್ಥೆಯು ಪಸೂಲಾತಿ ಪ್ರಗತಿಯ ಮೇಲ್ವಿಚಾರಣೆಗಾಗಿ ಪರಿಣಾಮಕಾರಿ ವ್ಯವಸ್ಥೆಯನ್ನು ಹೊಂದಿದೆ. ಸುಸ್ತಿದಾರ ಘಟಕಗಳನ್ನು ಆಯಾಯ ಘಟಕಗಳನ್ನು ಆಧರಿಸಿ ಕಾಲಾನುಕಾಲಕ್ಕೆ ವಿಮರ್ಶಿಸಲು ಸುಸ್ತಿ ಪರಿಶೀಲನ ಸಮಿತಿ/ಸೆಟಲ್ ಮೆಂಟ್ ಕಮಿಟಿಯನ್ನು ರೂಪಿಸಿದೆ. ಸುಸ್ತಿದಾರ ಘಟಕಗಳಿಂದ ಸಾಲ ಪಸೂಲಾತಿಗಾಗಿ ಈ ಕೆಳಗಿನ ಕ್ರಮಗಳನ್ನು ಸಂಸ್ಥೆಯು ಅನುಸರಿಸುತ್ತದೆ.

1. ಸುಸ್ತಿದಾರ ಘಟಕಗಳ ಸಾಲ ಬಾಕಿ ಎರಡು ಕಂತುಗಳಿಗಿಂತ ಹೆಚ್ಚಾಗಿದ್ದಲ್ಲಿ ಅಂತಹ ಘಟಕಗಳಿಗೆ ಸಾಲ ಮರುಪಾವತಿ ಮಾಡುವಂತೆ ಪತ್ರ ಮುಖೇನ ತಿಳಿಸಲಾಗುತ್ತದೆ ಮತ್ತು ಸಂಸ್ಥೆಯ ಅಧಿಕಾರಿಗಳು ಘಟಕಗಳಿಗೆ ಆಗಾಗ್ಗೆ ಭೇಟಿ ನೀಡಿ ಸಾಲ ಮರುಪಾವತಿ ಮಾಡುವಂತೆ ಮನವೊಲಿಸಲು ಪ್ರಯತ್ನಿಸಲಾಗುತ್ತದೆ.

2. ಘಟಕಗಳ ಸಾಲ ಬಾಕಿಯು 5 ಕಂತುಗಳಿಗಿಂತ ಹೆಚ್ಚಾಗಿದ್ದಲ್ಲಿ ಅಂತಹ ಘಟಕಗಳಿಗೆ ಸಂಸ್ಥೆಯ ಅಡ್ವೊಕೇಟ್ ಮುಖಾಂತರ ಲೀಗಲ್ ನೋಟೀಸ್ ಕಳುಹಿಸುವುದರ ಜೊತೆಗೆ ರಾಜ್ಯ ಹಣಕಾಸು ಸಂಸ್ಥೆಗಳ ಕಾಯ್ದೆಯ ಸೆಕ್ಷನ್ 29ರ ಪ್ರಕಾರ ನೋಟೀಸನ್ನು ಕಳುಹಿಸಿಕೊಡಲಾಗುವುದು. ಸಂಸ್ಥೆಯ ಅಧಿಕಾರಿಗಳು ಆಗಾಗ್ಗೆ ಘಟಕಗಳಿಗೆ ಭೇಟಿ ನೀಡಿ ಸಾಲ ಮರುಪಾವತಿ ಮಾಡಲು ಒತ್ತಾಯಿಸುತ್ತಾರೆ.

3. ಘಟಕಗಳು ಕಾರ್ಯ ನಿರ್ವಹಿಸುವಲ್ಲಿ ನೈಜ ಕಾರಣಗಳಿಂದಾಗಿ ವಿಫಲವಾಗಿರುವುದು ಕಂಡು ಬಂದಾಗ ಸಂಸ್ಥೆಯು ಅಂತಹ ಘಟಕಗಳನ್ನು ಅಸ್ವಸ್ಥ ಘಟಕಗಳೆಂದು ಗುರುತಿಸಿ, ಅಸ್ವಸ್ಥ ಘಟಕಗಳ ಪುನರುಜ್ಜೀವನ ಯೋಜನೆಯಡಿಯಲ್ಲಿ ಸಕಾಲಕ್ಕೆ

ಆರ್ಥಿಕ ನೆರವು ನೀಡುವುದು.

4. ನಂತರ ಸೆಕ್ಷನ್ 29ರ ಪ್ರಕಾರ ಘಟಕದ ಆಸ್ತಿಯನ್ನು ವಶಕ್ಕೆ ತೆಗೆದುಕೊಂಡು ಸಾಲಗಾರರು ಸಾಲ ಮರುಪಾವತಿ ಮಾಡಿ ಪುನಃ ಆಸ್ತಿಯನ್ನು ಹಿಂದಕ್ಕೆ ಪಡೆಯಲು ಅವಕಾಶಗಳನ್ನು ನೀಡುವುದು. ಇದರ ನಂತರವೂ ಸಾಲಗಾರರು ಮುಂದೆ ಬರದೆ ಇದ್ದಲ್ಲಿ ಸಂಸ್ಥೆಯು ಸಾಲ ನೀಡಿರುವ ಆಸ್ತಿಗಳನ್ನು ಮಾರಾಟ ಮಾಡಲು ಕ್ರಮ ಜರುಗಿಸುತ್ತದೆ.

5. ಘಟಕದ ಆಸ್ತಿಯನ್ನು ಹರಾಜಿನ ಮೂಲಕ ಮಾರಾಟ ಮಾಡಿದಾಗ ಸುಸ್ತಿಯಾದ ಮೊತ್ತವು ಪೂರ್ಣವಾಗಿ ವಸೂಲಾಗದಿದ್ದಲ್ಲಿ ಘಟಕದ ಪ್ರವರ್ತಕರ/ಜಾಮೀನುದಾರರ ವೈಯಕ್ತಿಕ ಖಾತರಿ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡುವುದಲ್ಲದೆ 1979ರ ಕರ್ನಾಟಕ ಸಾರ್ವಜನಿಕ ಹಣಕಾಸು(ಬಾಕಿ ವಸೂಲಾತಿ) ಕಾಯ್ದೆ ಪ್ರಕಾರ ಜಿಲ್ಲಾಧಿಕಾರಿಗಳಿಗೆ ವಹಿಸಿಕೊಡಲಾಗುವುದು.

6. ಘಟಕದ ಕಾರ್ಯ ಸಾಧ್ಯತೆಯು ಅನುಮಾನಾಸ್ಪದವೆಂದು ಕಂಡು ಬಂದಾಗ ಸಂಸ್ಥೆಯು ಏಕಗಂಟಿನ ಸಾಲ ಚುಕ್ತಾ ಸೌಲಭ್ಯವನ್ನು ಒದಗಿಸುವುದು. ಈ ಸೌಲಭ್ಯವನ್ನು ಪಡೆದುಕೊಂಡು ಪ್ರವರ್ತಕರು ತಮ್ಮ ಸಾಲಗಳನ್ನು ತೀರಿಸಿಕೊಳ್ಳಬಹುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 918(928)

ಸದಸ್ಯರ ಹೆಸರು: ಶ್ರೀ ಭಕ್ತವತ್ಸಲಂ ಎಂ.(ಕೆ.ಜಿ.ಎಫ್)

ಪ್ರಶ್ನೆ

ಅ) ಅಧ್ಯಕ್ಷರು ಹಾಗೂ ಆಯುಕ್ತರು ನಗರಸಭೆ ರಾಬರ್ಟ್‌ಸನ್‌ಪೇಟೆ, ಇವರ ವಿರುದ್ಧ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ ಇವರು ನೀಡಿರುವ ವರದಿಯ ಮೇಲೆ ಕೈಗೊಂಡ ಕ್ರಮವೇನು?

ಆ) ಲೋಕಾಯುಕ್ತರವರ ದೂರಿನ ಮೇರೆಗೆ ಅಧ್ಯಕ್ಷರು ಮತ್ತು ಆಯುಕ್ತರು, ನಗರಸಭೆ ರಾಬರ್ಟ್‌ಸನ್‌ಪೇಟೆ ಇವರುಗಳ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿರುವುದು ಸತ್ಯವಾಗಿದೆಯೆ?

ಉತ್ತರಿಸುವ ಸಚಿವರು: ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಉತ್ತರ